# ವಿಶ್ವನಂದಿನಿ ಲೇಖನಮಾಲೆ – 27

## ಸತ್ಯವತೀ-ಪರಾಶರ ಸಮಾಗಮ

(ಶ್ರೀವೇದವ್ಯಾಸಾವತಾರ ಪುಸ್ತಕದಿಂದ ಆಯ್ದ ಭಾಗ)

ಸದ್ಗುಣಗಳ ಖನಿಯಾಗಿದ್ದ ಮಂಗಲೆ ಸತ್ಯವತೀ ದಾಶರಾಜನ ವಾತ್ಸಲ್ಯದ ಆರೈಕೆಯಲ್ಲಿ ಬೆಳೆಯುತ್ತ ಯೌವನದ ಹೊಸ್ತಿಲನ್ನು ತುಳಿದಿರುತ್ತಾಳೆ. ದಾಶರಾಜನಿಗೆ ತಾನೆ ಮಗನಾಗಿ, ಮಗಳಾಗಿ ಬೆಳೆಯುತ್ತಿದ್ದವಳು. ಹೀಗಾಗಿ ತಂದೆಯ ಅನೇಕ ಕಾರ್ಯಗಳಲ್ಲಿ ಸಹಕಾರಿಣಿಯಾಗಿರುತ್ತಾಳೆ. ಸಾವಿರ ಜನ ಕುಳಿತುಕೊಳ್ಳುವ ದೊಡ್ಡ ದೋಣಿಯನ್ನು ನಡೆಸುವ ಶಕ್ತಿ, ಜಾಣ್ಮೆ ಎರಡೂ ಅವಳಿಗಿರುತ್ತದೆ. ಹೀಗಾಗಿ ತಾನು ದೋಣಿ ನಡೆಸುತ್ತಾ ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸೇರಿಸುವ ಕಾಯಕವನ್ನು ಸಂತೋಷದಿಂದ ಮಾಡುತ್ತಿರುತ್ತಾಳೆ. ಹುಟ್ಟಿನಿಂದ ಸುಂದರಿಯಾದ ಆ ಸೌಭಾಗ್ಯವತಿ

ಮೊದಲಬಾರಿಗೆ ಋತುಮತಿಯಾಗಿ ಚಂದ್ರ ಕಲೆಯಂತೆ ಶೋಭಿಸುತ್ತಿರುತ್ತಾಳೆ. **"ಗತಾ ಪ್ರಥಮಯೌವನಮ್"**

ಆ ಸಂದರ್ಭದಲ್ಲಿ ಸತ್ಯವತಿಯನ್ನು ಹುಡುಕಿಕೊಂಡು ಪರಾಶರರು ಅವಳು ದೋಣಿ ನಡೆಸುತ್ತಿದ್ದ ಪ್ರದೇಶಕ್ಕೆ ಬರುತ್ತಾರೆ. ಅಪ್ಸರಃಸ್ತ್ರೀಯರಿಗಿಂತಲೂ ಸುಂದರಿಯಾಗಿದ್ದ ಸತ್ಯವತಿಯನ್ನು ಕಂಡು ಆಕರ್ಷಿತರಾಗುತ್ತಾರೆ. ಶ್ರೀಹರಿಯ ತಾಯಿಯಾಗುವ ಎಲ್ಲ ಶುಭ ಲಕ್ಷಣಗಳು ಇವಳಿಗಿವೆ ಎಂದು ತಿಳಿದು ಅವಳನ್ನೇ ದಿಟ್ಟಿಸಿ ನೋಡುತ್ತ ಹತ್ತಿರ ಬಂದು ಮಧುರವಾದ ಧ್ವನಿಯಲ್ಲಿ ಪ್ರೇಮದಿಂದ ಮಾತನಾಡುತ್ತಾರೆ.

"ಭಾಮಿನಿ, ನಾನು ನದಿಯನ್ನು ದಾಟಬೇಕಾಗಿದೆ. ದೋಣಿ ಕಾಣುತ್ತಿದೆ. ಹಾಯಿಸುವವ ಕಾಣಿಸುತ್ತಿಲ್ಲ. ಎಲ್ಲಿ ಹೋಗಿದ್ದಾನೆ"

ಋಷಿಯ ಮಧುರ ನುಡಿಗಳನ್ನು ಕೇಳಿದ ಸತ್ಯವತೀ ಎದ್ದು ನಿಂತು ಗೌರವದಿಂದ ನುಡಿದಳು.

“ಪೂಜ್ಯರೇ, ನಾನು ದಾಶರಾಜನ ಪ್ರೀತಿಯ ಮಗಳು. ನನ್ನ ತಂದೆಯ ಕಾರ್ಯದಲ್ಲಿ ನೆರವಾಗಲು ನಾನೇ ದೋಣಿ ಹಾಯಿಸುವ ಕೆಲಸ ಮಾಡುತ್ತೇನೆ”

ಪರಾಶರರು ಸತ್ಯವತಿಯ ಮಾತನ್ನು ಕೇಳಿ ನಸುನಗುತ್ತ ಆ ಬೃಹತ್ ದೋಣಿಯಲ್ಲಿ ಏರಿ ಕುಳಿತುಕೊಂಡರು ಅವಳು ದೋಣಿ ನಡೆಸಲು ತಯಾರಾಗದೇ ಇದ್ದಾಗ ಮತ್ತೆ ಪ್ರಶ್ನಿಸಿದರು.

“ವಾಸವಿ, ಯಾರಿಗಾಗಿ ಕಾಯುತ್ತಿದ್ದಿ. ದೋಣಿಯನ್ನು ಮುನ್ನಡೆಸು”

ತನ್ನನ್ನು ವಾಸವಿ ಎಂದು ಸಂಭೋಸಿದ್ದನ್ನು ಆಶ್ಚರ್ಯದಿಂದ ಕೇಳಿಸಿಕೊಂಡ ಸತ್ಯವತೀ ವಿನಯದಿಂದಲೇ ಮರುನುಡಿದಳು.

“ಈ ದೋಣಿ ತುಂಬ ದೊಡ್ಡದು. ಪೂರ್ಣ ಒಂದು ಸಾವಿರ ಜನ ತುಂಬಿದರೆ ಮಾತ್ರ ಆಯ ತಪ್ಪದೆ ನೀರಿನಲ್ಲಿ ಹರಿಯುತ್ತದೆ. ಆ ಎಲ್ಲ ಜನರಿಗಾಗಿ ಕಾಯುತ್ತಿದ್ದೇನೆ. ಸ್ವಲ್ಪ ಸಮಯದಲ್ಲಿಯೇ ಜನರಿಲ್ಲಿಗೆ ಬಂದು ಸೇರುತ್ತಾರೆ”

ಸತ್ಯವತಿಯ ಮಾತನ್ನಾಲಿಸಿದ ಪರಾಶರರು ಮರು ನುಡಿದರು.

“ನನ್ನ ಕಮಂಡಲುವನ್ನು ಐದುನೂರು ಜನರ ಭಾರದ್ದನ್ನಾಗಿ ಮಾಡಿ ಒಂದು ಭಾಗದಲ್ಲಿಡುತ್ತೇನೆ ಮತ್ತೊಂದು ಕಡೆಯಲ್ಲಿ ಐದು ನೂರು ಜನರ ಭಾರದವನಾಗಿ ನಾನೇ ಕೂಡುತ್ತೇನೆ ನೀನು ದೋಣಿಯನ್ನು ನಡೆಸು”

ಹೀಗೆ ನುಡಿದು ಪರಾಶರರು ಕಮಂಡಲುವನ್ನು ಸರಿಯಾದ ಸ್ಥಳದಲ್ಲಿಟ್ಟು ತಾವೂ ಬಂದು ಕುಳಿತುಕೊಂಡರು. ಸತ್ಯವತೀ ಗಮನಿಸುತ್ತಿದ್ದಾಳೆ. ಸಾವಿರ ಜನ ಕುಳಿತಾಗ ನಿಲ್ಲುವಂತೆ ಭದ್ರವಾಗಿ ಅಲುಗಾಡದೆ ದೋಣಿ ನಿಂತಿದೆ. ನೀರಿನಲ್ಲಿ ಮುಳುಗಬೇಕಾದಷ್ಟು ಭಾಗ ಮುಳುಗಿದೆ. ಸತ್ಯವತಿ ಋಷಿಯನ್ನು ವಿಸ್ಮಯದಿಂದ ಕಾಣುತ್ತ ದೋಣಿ ನಡೆಸಲು ಮುಂದಾದಳು. ಅವರ ತೇಜಸ್ಸು, ವರ್ತನೆ, ಮಾತು, ಎಲ್ಲದರಿಂದ ಅವಳು ಆಕರ್ಷಿತಳಾಗಿದ್ದಳು. ತಪಸ್ಸೇ ಮೂರ್ತಿಮತ್ತಾಗಿ ನಿಂತಂತಿರುವ ಆ ತೇಜೋಮೂರ್ತಿಯನ್ನು ಕಣ್ತುಂಬ ನೋಡುತ್ತ ದೋಣಿಯನ್ನು ಯಮುನೆಯ ನೀರಿನಲ್ಲಿ

ತೇಲಿಸಲಾರಂಭಿಸಿದಳು. ಥಟ್ಟನೆ ಅವರು ತನ್ನನ್ನು ವಾಸವಿ ಎಂದು ಕರೆದದ್ದು ನೆನಪಾಗಿ ಪ್ರಶ್ನಿಸಿದಳು.

“ನನ್ನನ್ನು ಎಲ್ಲರೂ ಸತ್ಯವತಿ ಎನ್ನುತ್ತಾರೆ. ನಾನು ದಾಶರಾಜನ ಮಗಳು. ನನ್ನನ್ನೇಕೆ ನೀವು ವಾಸವಿ ಎಂದು ಕರೆದಿರಿ”

ಪರಾಶರರು ಮುಗುಳ್ನಕ್ಕು ಹೇಳಿದರು. ನೀನು ಬೆಸ್ತರ ಮಗಳಲ್ಲ. ವಸು ಮಹಾರಾಜನ ಮಗಳು. ಅದಕ್ಕೆ ವಾಸವಿ ಎಂದು ಕರೆದೆ. ಸತ್ಯವತಿಗೆ ವಿಸ್ಮಯವಾಯಿತು. ಅತೀತಾನಗತವನ್ನು ತಿಳಿದ ಮಹಾಜ್ಞಾನಿಗಳ ಲಕ್ಷಣ ಅವರಲ್ಲಿ ಗೋಚರವಾಗುತ್ತಿತ್ತು. ಕುತೂಹಲದಿಂದ, ಭಕ್ತಿಯಿಂದ ತನ್ನ ಹಿಂದಿನ ವೃತ್ತಾಂತವನ್ನು ಅರುಹುವಂತೆ ಬೇಡಿಕೊಂಡಳು. ಪರಾಶರರು ಭಗವಂತ ತಮಗೆ ತಿಳಿಸಿ ಹೇಳಿದ ಅವಳ ಹಿಂದಿನ ಜನ್ಮದ ವೃತ್ತಾಂತವನ್ನು ಹೇಳುತ್ತ ಹೋದಂತೆ ಅವಳಿಗೂ ಎಲ್ಲವೂ ನೆನಪಾಗತೊಡಗಿತು. ತಿರೋಹಿತವಾಗಿದ್ದ ಅಪಾರ ಜ್ಞಾನ ಅವಳಿಗೆ ಅಭಿವ್ಯಕ್ತವಾಗಲಾರಂಭಿಸಿತು.

ಪಿತೃದೇವತೆಗಳಲ್ಲಿ ಏಳು ಗಣಗಳಿವೆ. ಅದರಲ್ಲಿ ಒಂದು ಗಣದ ಪಿತೃಗಳ ಹೆಸರು ಬರ್ಹಿಷದರು ಎಂದು. ಸೋಮಪಾನದ ಅರ್ಹತೆಯುಳ್ಳ ಶ್ರೇಷ್ಠ ಯೋಗ್ಯತೆಯವರು. ಸತ್ಯವತೀ ಹಿಂದಿನ ಜನ್ಮದಲ್ಲಿ ಅವರ ಪುತ್ರಿ. ಜಿತೇಂದ್ರಿಯರೂ ಮಹಾತಪಸ್ವಿಗಳೂ ಆದ ಆ ಪಿತೃಗಳು ಹೆಣ್ಣಿನ ಆವಶ್ಯಕತೆಯಿಲ್ಲದೆ ಕೇವಲ ಮನಸ್ಸಿನಿಂದ ಮಗಳನ್ನು ಪಡೆದಿರುತ್ತಾರೆ. ಅಚ್ಛೋದಾ ಎಂಬ ಸುಂದರ ಆ ಹೆಸರಿನ ಮಗಳನ್ನು ಪ್ರೀತಿಯಿಂದ ಬೆಳೆಸುತ್ತಿರುತ್ತಾರೆ. ಆ ಪಿತೃಗಳ ಶರೀರ ತುಂಬ ಸಣ್ಣದಾದದ್ದು. ಮನೆಯ ಜಾಲರಿಯಲ್ಲಿ ತೂರಿಬಂದ ಬೆಳಕಲ್ಲಿ ಕಾಣುವ ಧೂಳಿನಷ್ಟು ಸಣ್ಣದಾದದ್ದು. ಹೀಗಾಗಿ ಅವಳಿಗೆ ತನ್ನ ತಂದೆ ಯಾರು ಎಂದೇ ತಿಳಿದಿರುವದಿಲ್ಲ. ಒಮ್ಮೆ ಮನುವಿನ ಮಗ ವಸು ಎಂಬ ದೇವತೆ ಅದ್ರಿಕೆ ಎಂಬ ಅಪ್ಸರೆಯೊಡನೆ ವಿಮಾನದಲ್ಲಿ ವಿಹರಿಸುತ್ತಿರುತ್ತಾನೆ. ತನ್ನನ್ನು ವಾತ್ಸಲ್ಯದ ನೋಟದಿಂದ ಕಂಡ ಅವನನ್ನು ಇವನೇ ತನ್ನ ತಂದೆ ಎಂದು ತಿಳಿದು ಅಚ್ಛೋದೆ ಸಂಭ್ರಮಿಸುತ್ತಾಳೆ. ಸಣ್ಣ ವಯಸ್ಸಿನಿಂದ ಕಕ್ಕುಲತೆಯಿಂದ ಬೆಳೆಸಿದ ತಮ್ಮನ್ನು ಎಲ್ಲಿದ್ದಾರೆ ಎಂದು ತಿಳಿಯಲೂ ಸಹ ಪ್ರಯತ್ನ

ಮಾಡದೇ ಎದುರಿಗೆ ವಸುವನ್ನು ಕಂಡಾಕ್ಷಣ ಅವನನ್ನು ತಂದೆಯೆಂದು ತಿಳಿದಿದ್ದಕ್ಕಾಗಿ ಪಿತೃಗಳು ಅಚ್ಛೋದೆಗೆ ಮನುಷ್ಯಳಾಗಿ ಹುಟ್ಟು ಎಂದು ಶಾಪವನ್ನೀಯುತ್ತಾರೆ. ಶಾಪಗ್ರಸ್ತಳಾದ ಅಚ್ಛೋದೆ ಅಧೋಮುಖಳಾಗಿ ಭೂಮಿಯ ಕಡೆ ಬೀಳಲಾರಂಭಿಸುತ್ತಾಳೆ. ಭಯದಿಂದ ಅಪ್ಪಾ ಎಂದು ಕಿರುಚಿಕೊಂಡಾಗ ಈ ವಾತ್ಸಲ್ಯದ ಪಿತೃಗಳು ಮೂರು ಪುಟ್ಟ ವಿಮಾನಗಳಲ್ಲಿ ಬಂದು ಅವಳನ್ನು ಬೀಳದಂತೆ ನಿಲ್ಲಿಸಿ ಅವಳ ಕಣ್ಣ ಮುಂದೆ ನಿಲ್ಲುತ್ತಾರೆ. ತುಂಬ ಸೂಕ್ಷ್ಮವಾದ ದೇಹದಲ್ಲಿ ಒಂದು ಅವಯವದಲ್ಲಿ ಮತ್ತೊಂದು ಅವಯವ ಕೂಡಿದಂತಿದ್ದ ಅವರನ್ನು ಕಂಡು ಯಾರು ನೀವು ಎಂದು ಪ್ರಶ್ನಿಸಿದಾಗ ನಾವೇ ನಿನ್ನನ್ನು ಮನಸ್ಸಿನಿಂದ ಪಡೆದ ಪಿತೃಗಳು ಎಂದು ತಿಳಿಸುತ್ತಾರೆ. ಅಚ್ಛೋದೆ ಸಂತೋಷದಿಂದ ಅವರೆಲ್ಲರ ಪಾದಕ್ಕೆರಗಿ ನಮಸ್ಕರಿಸುತ್ತಾಳೆ. ತನ್ನನ್ನು ಕ್ಷಮಿಸಬೇಕೆಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಮರುಗಿದ ಪಿತೃಗಳು ಅವಳನ್ನು ಕ್ಷಮಿಸಿ ಪ್ರೇಮದಿಂದ ಅನುಗ್ರಹಿಸುತ್ತಾರೆ. ಆದರೆ ತಾವು ನೀಡಿದ ಶಾಪ ವ್ಯರ್ಥವಾಗುವಂಥದ್ದಲ್ಲ ಎಂದು ಅವರಿಗೆ

ತಿಳಿದಿರುತ್ತವೆ. ಆದರೆ ಆ ಶಾಪವೇ ಅವಳಿಗೆ ಪರವಾಗಿ ಪರಿಣಮಿಸುವ ಉಪಾಯವನ್ನು ಅವರು ಹೇಳಿಕೊಡುತ್ತಾರೆ.

“ನಮ್ಮ ಶಾಪದ ಅನುಸಾರವಾಗಿ ಇಪ್ಪತ್ತೆಂಟನೆಯ ದ್ವಾಪರದಲ್ಲಿ ನೀನು ಹುಟ್ಟಲಿರುವೆ. ಈ ಮನುಪುತ್ರನಾದ ವಸುವೇ ಉಪರಿಚರವಸು ಎಂದು ಜನ್ಮ ತಾಳಿ ನಿನ್ನ ತಂದೆಯಾಗುತ್ತಾನೆ. ಆದ್ರಿಕೆ, ಗಂಗಾ ಯಮುನೆಯರ ಸಂಗಮಸ್ಥಳದಲ್ಲಿ ಬ್ರಹ್ಮಶಾಪದಿಂದ ಮೀನಾಗಿ ಹುಟ್ಟಿ ಬಂದಿರುತ್ತಾಳೆ. ಅವಳ ಹೊಟ್ಟೆಯಲ್ಲಿ ನಿನಗೆ ಜನ್ಮವಾಗಿ ಒಬ್ಬ ಬೆಸ್ತರಾಜನ ಮಗಳಾಗಿ ನೀನು ಬೆಳೆಯುತ್ತಿಯ. ನಮ್ಮ ಶಾಪದ ಪ್ರಭಾವದಿಂದ ಸ್ವಂತ ತಂದೆಯ ಬಳಿ ಬೆಳೆಯುವ ಯೋಗ ನಿನಗೆ ತಪ್ಪುತ್ತದೆ. ಮುಂದೆ ಕನ್ಯಾವಸ್ಥೆಯಲ್ಲಿಯೇ ಪರಾಶರರಿಂದ ಒಬ್ಬ ಮಗನನ್ನು ಪಡೆದು ಅವರ ಅನುಗ್ರಹದಿಂದ ಮತ್ತೆ ಕನ್ಯಾತ್ವವನ್ನು ಮರಳಿ ಪಡೆದು ಕುರುವಂಶದ ಶಂತನುವಿನ ಕೈ ಹಿಡಿದು ಚಿತ್ರಾಂಗದ, ವಿಚಿತ್ರವೀರ್ಯ ಎಂಬ ಮಕ್ಕಳನ್ನು ಪಡೆಯಲಿರುವೆ. ಶಾಪದಿಂದ ಬರಲಿರುವ ಮಾನುಷ ಜನ್ಮ ನಿನಗೆ ಸಾರ್ಥಕವಾಗಬೇಕಾದರೆ ಒಂದು ಪವಿತ್ರ

ಕಾರ್ಯವನ್ನು ಮಾಡು. ಪರಾಶರರು ಶ್ರೀಹರಿಯೇ ತಮ್ಮ ಮಗನಾಗಿ ಹುಟ್ಟಿ ಬರಬೇಕು ಎಂದು ತಪಸ್ಸು ಮಾಡುತ್ತಿದ್ದಾರೆ. ಅವನನ್ನು ಒಲಿಸಲು ಉಗ್ರ ತಪಸ್ಸಿನಲ್ಲಿ ತೊಡಗಿದ್ದಾರೆ. ನೀನೂ ಅನನ್ಯವಾಗಿ ಭಗವಂತನನ್ನು ಆರಾಸು. ಅವನೇ ನಿನ್ನ ಮಗನಾಗಿ ಹುಟ್ಟಿ ಬರಬೇಕು ಎಂದು ಪ್ರಾರ್ಥಿಸಿ ಹಗಲಿರುಳು ಆತನ ಸೇವೆಯನ್ನು ಮಾಡು. ಶ್ರೀಹರಿ ನಿನಗೆ ಒಲಿದಲ್ಲಿ ನಿನ್ನ ಗರ್ಭದಲ್ಲಿಯೇ ಅವತರಿಸಿ ಬಂದಾನು. ಮೋಕ್ಷಪ್ರದನನ್ನೇ ಮಗನನ್ನಾಗಿ ಪಡೆದ ಮೇಲೆ ನಿನ್ನ ಮುಕ್ತಿಯ ಮಾರ್ಗ ಕಠಿಣವಾಗುವದಿಲ್ಲ. ಅದಕ್ಕಾಗಿ ಘೋರ ತಪಸ್ಸನ್ನು ಮಾಡು”

ಬರ್ಹಿಷದ ಪಿತೃಗಳ ವಚನವನ್ನು ಕೇಳಿ ಸಂತುಷ್ಟಳಾದ ಅಚ್ಛೋದೆ ಕಠಿಣವ್ರತಗಳನ್ನು, ಉಪವಾಸಗಳನ್ನು ಮಾಡುತ್ತ , ತೀವ್ರವಾಗಿ ತನ್ನ ದೇಹವನ್ನು ದಂಡಿಸುತ್ತ,  ಅಂತರ್ಯಾಮಿಯನ್ನು ಒಲಿಸಲು ಪ್ರಯತ್ನವನ್ನಾರಂಭಿಸುತ್ತಾಳೆ. ಅವಳ ಭಕ್ತಿ, ಜ್ಞಾನ, ವಿರಕ್ತಿ ಮುಂತಾದ ಸದ್ಗುಣಗಳಿಂದ ಪ್ರೀತನಾದ ನಾರಾಯಣ ಅವಳ ಮುಂದೆ ಪ್ರತ್ಯಕ್ಷನಾಗಿ ನಿಲ್ಲುತ್ತಾನೆ. ವರಬೇಡು ಎಂದಾಗ ಎಂದಿಗೂ ಹುಟ್ಟಿಲ್ಲದ ನಿನಗೆ ತಾಯಿ ಎನಿಸುವ

ಸೌಭಾಗ್ಯವನ್ನು ಕರುಣಿಸು ಎಂದು ಬೇಡುತ್ತಾಳೆ. ಪ್ರಸನ್ನನಾದ ಹರಿ ಅವಳ ಬಯಕೆಯನ್ನು ಇಪ್ಪತ್ತೆಂಟನೆಯ ದ್ವಾಪರದಲ್ಲಿ ಪೂರೈಸುತ್ತೇನೆ ಎಂದು ಅನುಗ್ರಹಿಸಿ ಅಂತರ್ಹಿತನಾಗುತ್ತಾನೆ.

ಕಣ್ಣಿಗೆ ಕಟ್ಟುವಂತೆ ಪರಾಶರರು ತನ್ನ ಪೂರ್ವಜನ್ಮದ ವೃತ್ತಾಂತವನ್ನು ತಿಳಿಸುತ್ತ ಹೋದಂತೆ ಸತ್ಯವತಿಗೆ ಎಲ್ಲವೂ ನೆನಪಾಗತೊಡಗಿದವು. **"ವಿಸ್ಮಯಾವಿಷ್ಟಸರ್ವಾಂಗೀ ಜಾತಿಸ್ಮರಣತಾಂ ಗತಾ"** ಪಿತೃಗಳು ತನ್ನ ಮೇಲೆ ಮಾಡಿರುವ ನಿಗ್ರಹರೂಪದ ಅನುಗ್ರಹ, ತಾನು ಮಾಡಿದ ಘೋರ ತಪಸ್ಸು, ಸರ್ವೋತ್ತಮನಾದ ಶ್ರೀಹರಿ ಒಲಿದ ರೀತಿ, ಸ್ವಯಂಭುವಾದರೂ ನಿನ್ನ ಗರ್ಭದಲ್ಲಿ ಅವತರಿಸಿ ಬರುತ್ತೇನೆ ಎಂದು ಅವನಿತ್ತ ವಚನ, ಜಗವೆ ಮಣಿವ ಪರಬ್ರಹ್ಮನನ್ನು 'ಮಗ' ಎಂದು ಉಪಾಸಿಸುವ ತನ್ನ ಸೌಭಾಗ್ಯ, ಎಲ್ಲವನ್ನೂ ನೆನೆಸಿಕೊಂಡು ಅವಳ ಮೈ ಪುಳಕಗೊಂಡಿತು. ತನ್ನ ಮಹೋನ್ನತ ಸೌಭಾಗ್ಯವನ್ನು ನೆನೆನೆನೆದು ಹಿರಿ ಹಿಗ್ಗಿದಳು. ತನ್ನ ಈ ಸೌಭಾಗ್ಯಕ್ಕೆ ಕಾರಣರಾದ ಕರುಣಾಳು ಪರಾಶರ ಮಹರ್ಷಿಗಳನ್ನು ಗೌರವ ಪ್ರೀತಿಗಳಿಂದ ದಿಟ್ಟಿಸಿ ತಾನು ಕುಳಿತಲ್ಲಿಂದ ಎದ್ದು ಬಂದು ಅವರ

ಪಾದಗಳಿಗೆ ನಮಸ್ಕರಿಸಿ ನಾ ನಿಮ್ಮ ದಾಸಿ ಎಂಬ ಸಮರ್ಪಣಾಭಾವದ ನೋಟವನ್ನು ಬೀರುತ್ತ ನಿಂತಳು. ಪರಾಶರರು ಅವಳ ಕೈಗಳನ್ನು ತಮ್ಮ ಪವಿತ್ರ ಹಸ್ತಗಳಿಂದ ಹಿಡಿದು ಮಧುರಧ್ವನಿಯಲ್ಲಿ ನುಡಿದರು.

“ವಾಸವಿ, ನಿನ್ನಿಂದ ನನ್ನ ವಂಶದೀಪಕನಾದ ಜಗಜ್ಜ್ಯೋತಿಯಾದ ಭಗವಂತನನ್ನು ಪಡೆಯಬೇಕಾಗಿದೆ. ಅದಕ್ಕಾಗಿ ನಿನ್ನ ಸಂಗವನ್ನು ಆಪೇಕ್ಷಿಸಿ ಬಂದಿದ್ದೇನೆ. ನನ್ನ ಕೋರಿಕೆಯನ್ನು ಮನ್ನಿಸುವೆಯಾ”

ಸತ್ಯವತಿಗೆ ಈ ಮಾತು ಕೇಳಿ ಅಮೃತದ ಧಾರೆಯಲ್ಲಿ ಮೀದಂತಾಯಿತು. ತನ್ನ ನೂರಾರು ವರ್ಷಗಳ ಘೋರ ತಪಸ್ಸಿನ ಫಲ ಕೈಗೊಡಲಿದೆ. ಶ್ರೀಹರಿ ನನ್ನ ಗರ್ಭದ ಮುಖಾಂತರ ಪ್ರಾದುರ್ಭೂತನಾಗಲಿದ್ದಾನೆ. ನಾನೇ ಬಯಸಿ ಬೇಡಿರುವ ಸೌಭಾಗ್ಯವನ್ನು ನನಗೆ ನೀಡಲು ಈ ಮಹರ್ಷಿಗಳು ನನ್ನ ಅನುಮತಿಯನ್ನು ಕೇಳುತ್ತಿದ್ದಾರೆ. ಸಜ್ಜನರ ಸ್ವಭಾವವೇ ಅಂತಹುದು. ತಮ್ಮಿಂದಲೇ ಮತ್ತೊಬ್ಬರಿಗೆ

ಮಹೋಪಕಾರವಾಗುವದಿದ್ದರೂ ವಿನಯವನ್ನು ಬಿಡುವವರಲ್ಲ, ಮರ್ಯಾದೆಯನ್ನು ಮೀರುವವರಲ್ಲ. ದರ್ಪತೋರುವವರಲ್ಲ. ತನ್ನನ್ನು ಲೈಂಗಿಕ ಸುಖ ನೀಡುವ ಭೋಗದ ವಸ್ತುವನ್ನಾಗಿ ಪರಾಶರರು ಕಾಣುತ್ತಿಲ್ಲ. ಆ ಲೈಂಗಿಕ ಸುಖ ಅವರಿಗೆ ಅಪೇಕ್ಷಿತವೂ ಅಲ್ಲ. ಅದನ್ನು ತುಚ್ಛ ಎಂದು ತಿರಸ್ಕರಿಸಿ ಭಗವಂತನ ಕಡೆಗೆ ಮುಖಮಾಡಿ ನಿಂತ ಜಿತೇಂದ್ರಿಯರು. ತಮ್ಮ ವಂಶದೀಪಕನನ್ನು. ಭಗವಂತನನ್ನು ಅವರಿಗೆ ನೀಡಲಿರುವ ಮಹಾದಾನಿಯನ್ನಾಗಿ ನನ್ನನ್ನು ಕಾಣುತ್ತಿದ್ದಾರೆ. ಇಂಥ ಸೌಜನ್ಯ ಮೂರ್ತಿಯ ಅಂಗಸಂಗ ಮಾಡುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯ. ಹೀಗೆ ಯೋಚಿಸಿದ ಸತ್ಯವತೀ ಸ್ತ್ರೀಸಹಜ ನಾಚಿಕೆಯಿಂದ ಕುಡಿಗಣ್ಣಿನಿಂದ ಪರಾಶರರನ್ನು ಕಾಣುತ್ತ ನುಡಿದಳು.

“ಎರಡೂ ದಡಗಳಲ್ಲಿ ಜನಸಮೂಹ ನಿಂತಿದೆ. ತಪಸ್ವಿಗಳಿದ್ದಾರೆ. ಅವರೆಲ್ಲರೂ ನೋಡುತ್ತಿರುವಾಗ....”

ಸತ್ಯವತಿಯ ಮಾತು ನಾಚಿಕೆಯಿಂದ ಅರ್ಧಕ್ಕೇ ನಿಂತಿತು. ಅದರಿಂದಲೇ ಅವಳ ಒಪ್ಪಿಗೆಯನ್ನು ಅರಿತ ಪರಾಶರರು ತಕ್ಷಣದಲ್ಲಿ ತಮ್ಮ ಸಾಮರ್ಥ್ಯದಿಂದ ಮಂಜನ್ನು ಸೃಷ್ಟಿಸಿಬಿಟ್ಟರು. ನದಿಯ ಮೇಲೆ ಮಂಜು ಕವಿಯುವದು ಸಾಮಾನ್ಯ. ಹೀಗಾಗಿ ಯಾರೂ ಪರೀಕ್ಷಿಸುವ ಗೋಜಿಗೂ ಬರುವುದಿಲ್ಲ ಎಂದವರಿಗೆ ತಿಳಿದಿತ್ತು. ಆಚೆ ಈಚೆಯ ಜನರಿಗೆ ಏನೂ ಕಾಣುತ್ತಿಲ್ಲ. ಪರಾಶರರು ಮೆಲ್ಲನೆ ಅಡಿಯನ್ನಿಡುತ್ತ ಸತ್ಯವತಿಯನ್ನು ಸ್ಪರ್ಶಿಸಿದರು. ಅವರ ಸ್ಪರ್ಶದಿಂದ ಪುಳಕಿತಳಾದ ದೇವಿ ಕಣ್ಣೆತ್ತಿ ಪ್ರೇಮದಿಂದ ಪರಾಶರರನ್ನು ಕಂಡಳು. ತಾನವರನ್ನು ನಿರಾಕರಿಸುತ್ತಿಲ್ಲ ಎಂದು ಸ್ಪಷ್ಟವಾಗಲಿ ಎಂಬಂತೆ ಮೃದುವಾದ ಧ್ವನಿಯಲ್ಲಿ ನಿವೇದಿಸಿಕೊಂಡಳು.

“ಭಗವನ್,  ತಂದೆಯ ಮನೆಯಲ್ಲಿರುವ ಕನ್ಯೆ ನಾನು. ಮೊದಲ ಋತುವನ್ನು ಮಾತ್ರ ಕಂಡಿರುವ ನೂತನ ಯುವತಿ. ನಿಮ್ಮ ಸಂಯೋಗದಿಂದ ಕನ್ಯಾತನ  ಕಳೆದುಕೊಂಡ ಮೇಲೆ ತಂದೆಯನ್ನು ನೋಡುವ ಧೈರ್ಯ ನನಗಿಲ್ಲ. ಸಾವಿರಜನ್ಮಗಳ ತಪಸ್ಸಿನಿಂದಲೂ ಪಡೆಯಲಾಗದ ಶ್ರೀಹರಿಯನ್ನೆ ಕರುಣಿಸಲು ಬಂದಿರುವ ನಿಮ್ಮನ್ನು ತೊರೆಯುದಕ್ಕೂ

ನಾನು ಸಿದ್ಧಳಲ್ಲ.  ನನ್ನ ಮನಸ್ಸಿನ ಚಿಂತೆಯಿದು. ಆದರೆ ನೀವು ತಿಳಿಸಿದಂತೆ ನಡೆಯಲು ನಾನು ಸಿದ್ಧ''

ಶೀಲದ ಬಗ್ಗೆ ಇರುವ ಗೌರವ, ಎಚ್ಚರಗಳು, ತಮ್ಮ ಬಗೆಗಿನ ವಿಶ್ವಾಸ, ಭಗವಂತನನ್ನು ಪಡೆಯುವ ಭಕ್ತಿಪೂರ್ಣ ಕಾತರ ಇವೆಲ್ಲವನ್ನೂ ಕಂಡು ಪರಮಪ್ರೀತರಾದ ಮಹರ್ಷಿಗಳು ಅವಳ ಮೈದಡವಿ ಸಂತೈಸಿದರು.

‘‘ವಾಸವಿ, ಚಿಂತಿಸದಿರು. ನನ್ನ ಸಂಯೋಗವನ್ನು ಹೊಂದಿದ ನಂತರವೂ ನೀನು ಕನ್ಯೆಯಾಗಿ ಉಳಿಯುವಿ. ನನ್ನ ತಪಃಪ್ರಭಾವದಿಂದ ನಿನ್ನನ್ನು ಕನ್ಯೆಯನ್ನಾಗಿ ಮಾಡುತ್ತೇನೆ''

ಪರಾಶರರ ಮಾತಿನಿಂದ ಸಂತೃಪ್ತಳಾದ ಸತ್ಯವತೀ ನಿರ್ವಿಶಂಕವಾಗಿ ಸಂಗಮಕ್ಕೆ ಸಿದ್ಧಳಾದಳು. ಅವರಿಬ್ಬರಲ್ಲಿ ಹೊಲಸು ಕಾಮವಿರಲಿಲ್ಲ. ಭಗವಂತನನ್ನು ಪಡೆಯಲು ನಡೆಯುತ್ತಿರುವ ಯಜ್ಞ ಇದು ಎಂಬ ಪವಿತ್ರಭಾವನೆಯಿತ್ತು. ಪರಸ್ಪರರ ದೇಹದ ಮೇಲಿನ ವಾಂಛೆಗಿಂತ

ಸರ್ವವೇದಪ್ರತಿಪಾದ್ಯನಾದ ಲಕ್ಷ್ಮೀರಮಣನನ್ನು ಮಗನನ್ನಾಗಿ ಪಡೆಯಬೇಕೆಂಬ ಬಯಕೆ ಹೆಚ್ಚಾಗಿತ್ತು. ಆದ್ದರಿಂದಲೇ ಮೈಪುಳಕಗೊಂಡಿತ್ತು. ಕರುಣಾಳುಗಳಾದ ಪರಾಶರರು ಸತ್ಯವತೀಯನ್ನು ಪಕ್ಕದಲ್ಲಿಯೇ ಕೂಡಿಸಿಕೊಂಡರು. ಸತ್ಯವತೀ ವಿನಯಪ್ರೇಮಗಳಿಂದ ಪರಾಶರರನ್ನು ಅಪ್ಪಿಕುಳಿತಳು. ತನ್ನ ದೇಹದ ಮೀನಿನ ವಾಸನೆ ಪರಾಶರರಿಗೆ ಕಸಿವಿಸಿ ಉಂಡುಮಾಡುತ್ತದೆ ಎಂಬ ಭಯ. ಅದರಿಂದ ಆ ಕ್ಷಣಕ್ಕೆ ಅವಳಿಗೆ ತನ್ನ ಬಗ್ಗೆ ಹೇಸಿಗೆ ಮನೆಮಾಡಿತ್ತು. ಆದರೆ ಪರಾಶರರು ಕಾಮದಿಂದ ಅವಳ ಬಳಿ ಬಂದವರಲ್ಲ. ಅವಳ ಲಾವಣ್ಯಕ್ಕಾಗಿ ಅವಳನ್ನು ಅನುಭವಿಸಲು ಬಂದವರಲ್ಲ. ಹೊರಗಿನ ರೂಪ,ಸೌಂದರ್ಯಗಳನ್ನು ಸವಿಯುವಂಥ ಲೌಕಿಕ ಜನರ ಗುಂಪಿಗೆ ಸೇರಿದವರಲ್ಲ. ಆ ಮತ್ಸ್ಯಗಂಧಿಯ ಭಯವನ್ನು ನಿವಾರಿಸುವ ಹಾಗೆ ಪ್ರೇಮಪೂರ್ಣರಾಗಿ ತೋಳಿನಿಂದ ಅವಳನ್ನು ಬಳಸಿ ಮತ್ತಷ್ಟು ಹತ್ತಿರಕ್ಕಪ್ಪಿಕೊಂಡು ಕೇಳಿದರು.

“ಭಾಮಿನಿ, ಯಾವ ವರವನ್ನಾದರೂ ನನ್ನಿಂದ ಕೇಳಿ ಪಡೆ. ಹರಿಯ ಅನುಗ್ರಹದಿಂದ, ತಪಸ್ಸಿನ

ಬಲದಿಂದ ನನ್ನ ವರ ವ್ಯರ್ಥವಾಗುವುದಿಲ್ಲ. ಬೇಡಿದ್ದನ್ನು ಕರುಣಿಸುವ ಸಾಮರ್ಥ್ಯ ನನಗಿದೆ"

ತನ್ನ ಮನಸ್ಸನ್ನು ಓದಿದವರಂತೆ ಮಹರ್ಷಿಗಳಾಡಿದ ನುಡಿ ಕೇಳಿ ಸಂತಸದಿಂದ ಸತ್ಯವತೀ ನುಡಿದಳು.

"ಭಗವನ್, ನನ್ನ ದೇಹದ ದುರ್ಗಂಧವನ್ನು ಹೋಗಲಾಡಿಸಿ ಸೌಗಂಧ್ಯವನ್ನು ನೀಡಬಲ್ಲಿರಾ"

ಪರಾಶರರು ಪ್ರೀತಿಯಿಂದ ಮೈದಡಿವಿದರು. ಸಾವಿರಾರು ವರ್ಷಗಳ ದೀರ್ಘಕಾಲ ತಪಸ್ಸು ಮಾಡಿದ ಮಹಾನುಭಾವರು. ಶ್ರೀಹರಿಯನ್ನೇ ಸಾಕ್ಷಾತ್ಕರಿಸಿ ಕೊಂಡವರು. ಅವರಿಗಿದು ಅಸಾಧ್ಯದ ಮಾತೇ. ಮೀನಿನ ದುರ್ಗಂಧವಿದ್ದ ಸತ್ಯವತೀ ಸುವಾಸನೆಯ ಗಂಧ ಬೀರುವ ಸುಗಂಧವತಿಯಾದಳು. ಅವಳು ಕುಳಿತ ಒಂದು ಯೋಜನ ದೂರದವರೆಗೆ ಆ ಸೌಗಂಧ್ಯ ಹರಡುತ್ತಿತ್ತು. ಹೀಗಾಗಿ ಜನರಿಂದ ಮತ್ಸ್ಯಗಂಧೀ ಎಂದು ಹೀಯಾಳಿಕೊಳ್ಳುತ್ತಿದ್ದವಳನ್ನು ಯೋಜನಗಂಧೀ ಎಂದು ಹೊಗಳಿಸಿಕೊಳ್ಳುವಂತೆ ಮಾಡಿದರು. ಪರಾಶರರಿತ್ತ ಈ ಸೌಭಾಗ್ಯದಿಂದಲೇ

ಸತ್ಯವತಿ ಮುಂದೆ ಕುರುಕುಲದ ದೊರೆ ಶಂತನುವನ್ನು ಮದುವೆಯಾಗುತ್ತಾಳೆ. ದೊಡ್ಡವರ ಸ್ವಭಾವವೇ ಅಂಥಹುದು. ಬೊಗಸೆಯಷ್ಟು ಬೇಡಿದರೆ ಬೆಟ್ಟದಷ್ಟು ನೀಡುತ್ತಾರೆ.

ದುರ್ಗಂಧವನ್ನು ಕಳೆದು ಕೊಂಡು ಸುಗಂಧವನ್ನು ಬೀರಲಾರಂಭಿಸಿದ ಸತ್ಯವತೀ ಯಾವ ಸಂಕೋಚವಿಲ್ಲದೇ ತನ್ನನ್ನು ತಾನು ಪರಾಶರರಿಗೆ ಸಮರ್ಪಿಸಿಕೊಂಡಳು. ಜಿತೇಂದ್ರಿಯರಾದ ಪರಾಶರರು ಸತ್ಯವತಿಗೆ ಪರಿಪೂರ್ಣ ಸುಖವನ್ನು ನೀಡಿದರು. ಸಾವಿರಾರು ವರ್ಷಗಳ ತಮ್ಮ ತಪೋಯಜ್ಞದ ಪೂರ್ಣಾಹುತಿಯನ್ನು ಈ ಮೈಥುನಯಜ್ಞದ ಅಗ್ನಿಯಲ್ಲಿ ಯಜ್ಞಪತಿ ನಾರಾಯಣನಿಗೆ ಸಮರ್ಪಿಸಿದರು. ಪರಾಶರ ಸತ್ಯವತಿಯರಿಬ್ಬರೂ ಸುರತ  ಆನಂದದ ದಿವ್ಯಸುಖವನ್ನು ಅನುಭವಿಸಿ ಧನ್ಯತಾಭಾವವನ್ನು ಅನುಭವಿಸಿದರು.

ಎಂದೆದಿಗೂ ಹುಟ್ಟಿಲ್ಲದ ಭಗವಂತನ ಪ್ರಾದುರ್ಭಾವಕ್ಕೆ ಇದೊಂದು ನಿಮಿತ್ತವಷ್ಟೇ. ನರಸಿಂಹನಾಗಿ ಪ್ರಾದುರ್ಭೂತನಾದಾಗ ಕಂಬವನ್ನು

ನಿಮಿತ್ತ ಮಾಡಿಕೊಂಡಂತೆ ಇಲ್ಲಿ ಪರಾಶರ, ಸತ್ಯವತಿಯರನ್ನು ನಿಮಿತ್ತ ಮಾಡಿಕೊಂಡ, ಮತ್ತೊಂದು ಕಡೆ ದೇವಕೀ ವಸುದೇವರನ್ನು. ಮಗದೊಂದು ಕಡೆ ಜಮದಗ್ನಿ ರೇಣುಕೆಯರನ್ನು. ಅವನ ಲೀಲೆ, ವಿಚಾರ ಮಾಡುವ ಬುದ್ಧಿಶಕ್ತಿ ಇರುವ ಜನರಿಗೆ ಲೀಲಾದಾಯಕ, ಬುದ್ಧಿಹೀನ ಮೂರ್ಖರಿಗೆ ಅಣಕದ ವಿಷಯ. ಇಡಿಯ ಲೋಕಕ್ಕೆ ಬದುಕು ನೀಡಿ, ಗೂಬೆಯ ಕಣ್ಮುಚ್ಚಿಸುವ ಸೂರ್ಯನ ಬೆಳಕಿನಂತೆ.

ಇಡಿಯ ಬ್ರಹ್ಮಾಂಡವನ್ನೂ ಅದರ ಮೇಲಿನ ಒಂಭತ್ತು ಆವರಣಗಳನ್ನೂ ಸೃಷ್ಟಿಸುವ ಅಪರಿಚ್ಛಿನ್ನ ಪ್ರಕೃತಿಯನ್ನೂ ತನ್ನ ಇಚ್ಛೆಯಂತೆ ನಿಯಮಿಸುವ ಆ ನಾರಾಯಣ ಇಡಿಯ ಅವ್ಯಾಕೃತ ಆಕಾಶದಲ್ಲಿ ಪರಮಾಣುವಿನಿಷ್ಟೂ ಇರದ ಸಾವರಣ ಬ್ರಹ್ಮಾಂಡದ ಒಳಗಡೆ ಒಂದು ಸಣ್ಣ ಭಾಗದಲ್ಲಿರುವ ಪೃಥಿವಿಯಲ್ಲಿ ಎಲ್ಲೋ ಒಂದು ಸಣ್ಣ ಭಾಗದಲ್ಲಿರುವ ಒಬ್ಬ ಋಷಿಯ ವೀರ್ಯದಿಂದ ಹುಟ್ಟಿಬರಲು ಸಾಧ್ಯವೇ ? ಅನಂತ ಜೀವರಾಶಿಗಳನ್ನೂ ತನ್ನ ಬಸಿರಿನಲ್ಲಿರಿಸಿಕೊಂಡ ಜಗದೀಶ ಒಬ್ಬ ಸಾಮಾನ್ಯ ಹೆಣ್ಣಿನ ಗರ್ಭದ ಚೀಲದಿಂದ ಹುಟ್ಟಿ ಬಂದಾನೇ ?

ಜ್ಞಾನಾನಂದಾತ್ಮಕವಾದ ಅವನ ಅಪ್ರಾಕೃತ ಶರೀರ ಗಂಡು ಹೆಣ್ಣುಗಳ ಶುಕ್ಲ ರಕ್ತದಿಂದ ನಿರ್ಮಾಣವಾಗಲು ಸಾಧ್ಯವೇ ? ಜಗತ್ತಿನ ಮಧ್ಯದಲ್ಲಿ ಕಾರುಣ್ಯದಿಂದ ಬಂದು ಹೋಗುವ ಅವನಿಗೆ ಲೋಕಧರ್ಮವನ್ನು ಅನುಸರಿಸುವದು ಒಂದು ಲೀಲೆಯಷ್ಟೆ. ನರಸಿಂಹನಂತೆ ಪ್ರತೀ ಅವತಾರದಲ್ಲಿಯೂ ತಕ್ಷಣ ಪ್ರಾದುರ್ಭೂತನಾಗಲ್ಲ ಆ ಸ್ವಾಮಿ ಪರಾಶರ ಕರ್ದಮ ಕಾಶ್ಯಪರಂತ ತನ್ನ ಭಕ್ತರ ಮೇಲಿನ ಅನುಗ್ರಹದಿಂದ ಅವರನ್ನು ನಿಮಿತ್ತ ಮಾಡಿಕೊಂಡು ಅವರ ಮುಖಾಂತರ ಅವತರಿಸುತ್ತಾನಷ್ಟೆ ಹೊರತು ಮತ್ತೊಂದಲ್ಲ.

(ಮುಂದಿನ ಲೇಖನದಲ್ಲಿ ವೇದವ್ಯಾಸದೇವರ ಪ್ರಾದುರ್ಭಾವವನ್ನು ತಿಳಿಯೋಣ. )

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491